# 100ನೇ ವಿಶ್ವ ಸುವಾರ್ತ ಪ್ರಸಾರ ದಿನಾಚರಣಗೆ ವಿಶ್ವಗುರುಗಳ ಸಂದೇಶ

ಸಂದೇಶದ ವಿಷಯ : ಕ್ರಿಸ್ತರಲ್ಲಿ ಒಂದಾಗೋಣ, ಸುವಾರ್ತ ಸೇವೆಯಲ್ಲಿ ಐಕ್ಯತೆಯನ್ನು ಸಾಧಿಸೋಣ

ಒಲವಿನ ಸಹೋದರ ಸಹೋದರಿಯರೇ,

ವಿಶ್ವಗುರು 11ನೇ ಪಯಸ್ ರವರಿಂದ ಪ್ರಾರಂಭಿಸಲ್ಪಟ್ಟು ಧರ್ಮಸಭೆಗೆ ಅತಿ ಪ್ರಿಯವಾಗಿರುವ ಹಾಗೂ ಈ ವರ್ಷ ತನ್ನ ಶತಮಾನೋತ್ಸವವನ್ನು ಆಚರಿಸಲಿರುವ ವಿಶ್ವ ಸುವಾರ್ತ ಪ್ರಸಾರ ದಿನಾಚರಣೆಯ ಸಂದೇಶಕ್ಕೆ ನಾನು ಆಯ್ಕೆ ಮಾಡಿರುವ ವಿಷಯ: "ಕ್ರಿಸ್ತರಲ್ಲಿ ಒಂದಾಗೋಣ, ಸುವಾರ್ತ ಸೇವೆಯಲ್ಲಿ ಐಕ್ಯತೆಯನ್ನು ಸಾಧಿಸೋಣ". ಜೂಬಿಲಿ ವರ್ಷದ ಬಳಿಕ ಸಂತೋಷ ಹಾಗೂ ಶ್ರದ್ಧೆಯಿಂದ ಪವಿತ್ರಾತ್ಮರಲ್ಲಿ ತನ್ನ ಸುವಾರ್ತ ಸೇವೆಯನ್ನು ಮುಂದುವರಿಸಲು ನಾನು ಅಖಿಲ ಧರ್ಮಸಭೆಗೆ ಕರೆ ನೀಡುತ್ತೇನೆ. ಇದು ಸಾಧ್ಯವಾಗಬೇಕಾದರೆ ಕ್ರಿಸ್ತರಲ್ಲಿ ಹೃದಯಗಳು ಒಂದಾಗಬೇಕು, ಸಮುದಾಯಗಳಲ್ಲಿ ರಾಜಿಸಂಧಾನದ ಮನೋಭಾವವಿರಬೇಕು ಹಾಗೂ ಪ್ರತಿಯೊಬ್ಬರಲ್ಲೂ ಉದಾರತೆ ಮತ್ತು ನಂಬಿಕೆಯಿಂದ ಸಹಕರಿಸುವ ಮನಸ್ಸಿರಬೇಕು.

ಕ್ರಿಸ್ತರಲ್ಲಿ ಒಂದಾಗುವ ಹಾಗೂ ಸುವಾರ್ತ ಸೇವೆಯಲ್ಲಿ ಐಕ್ಯತೆಯನ್ನು ಸಾಧಿಸುವ ವಿಷಯವನ್ನು ಕುರಿತು ನಾವು ಪರಿಶೀಲಿಸುವ ಈ ಸಂದರ್ಭದಲ್ಲಿ, "ಸುವಾರ್ತ ಸೇವೆಯ ನಮ್ಮ ಕರೆಯ ಜ್ವಾಲೆಯನ್ನು ನವೀಕರಿಸಲು" ಮತ್ತು ಧರ್ಮಸಭೆಯ ಇತಿಹಾಸದ ಇಂದಿನ "ನವ ಸುವಾರ್ತ ಸೇವೆಯ ಯುಗದಲ್ಲಿ" ಸುವಾರ್ತ ಸೇವೆಗೆ ಜೊತೆಜೊತೆಯಾಗಿ ಬದ್ಧರಾಗಿ ಮುನ್ನಡೆಯಲು ಶಕ್ತರಾಗುವಂತೆ ದೇವರು ನಮಗೆ ನೀಡುವ ಕೃಪೆಯಿಂದ ಮಾರ್ಗದರ್ಶನ ಮತ್ತು ಪ್ರೇರಣೆಯನ್ನು ಪಡೆಯೋಣ. (Homily, Jubilee of the Missionary World and of Migrants, 5 October 2025).

*1. ಕ್ರಿಸ್ತರಲ್ಲಿ ಒಂದಾಗೋಣ – ಕ್ರಿಸ್ತರಲ್ಲಿ ಒಂದಾಗುವ ಮತ್ತು ನಮ್ಮ ಸಹೋದರ ಸಹೋದರಿಯರೊಂದಿಗೆ ಒಂದಾಗುವ ಸುವಾರ್ತ ಪ್ರೇಷಿತವೃಂದ*

ಕ್ರಿಸ್ತರಲ್ಲಿ ಒಂದಾಗುವ ರಹಸ್ಯವು ಸುವಾರ್ತ ಸೇವೆಯ ಹೃದಯ ಭಾಗದಂತಿರುತ್ತದೆ. ತಮ್ಮ ಯಾತನೆಗೆ ಮುಂಚೆ ಪ್ರಭು ಯೇಸು ತಮ್ಮ ತಂದೆಯೊಂದಿಗೆ ಈ ಪರಿ ಪ್ರಾರ್ಥಿಸಿದರು: "ಪಿತನೇ, ಇವರೆಲ್ಲಾ ಒಂದಾಗಿರಲಿ, ನೀವು ನನ್ನಲ್ಲಿ, ನಾನು ನಿಮ್ಮಲ್ಲಿ ಇರುವಂತೆಯೇ ಇವರೂ ನಮ್ಮಲ್ಲಿ ಒಂದಾಗಿರಲಿ" (ಯೊವಾನ್ನ 17:21). ಪ್ರಭು ಯೇಸುವಿನ ಈ ಮಾತುಗಳು ಅವರ ಅಂತರಂಗದ ಬಯಕೆಯನ್ನು, ಅಂತೆಯೇ ಧರ್ಮಸಭೆಯು ಅವರ ಶಿಷ್ಯವೃಂದದ ಸಮುದಾಯ ಎಂಬುದನ್ನು ನಮ್ಮ ಗಮನಕ್ಕೆ ತರುತ್ತದೆ. ಅಂದರೆ ಈ ಬಾಂಧವ್ಯವು ಪರಮ ತ್ರಿತ್ವದಿಂದ ಹೊರಹೊಮ್ಮುತ್ತದೆ, ಮತ್ತು ಪರಮ ತ್ರಿತ್ವವೇ ಈ ಬಾಂಧವ್ಯವನ್ನು ಪೋಷಿಸುತ್ತದೆ. ಈ ಬಾಂಧವ್ಯವು ಇಡೀ ಮನುಷ್ಯ ಕುಲದ ಭ್ರಾತೃತ್ವ ಸೇವೆಗೆ ಮತ್ತು ಇಡೀ ಸೃಷ್ಟಿಯ ಸಾಮರಸ್ಯಕ್ಕೆ ತನ್ನನ್ನೇ ಮೀಸಲಾಗಿಡುತ್ತದೆ.

- ಕೇವಲ ಆಚರಣೆಗಳಲ್ಲಿ ಮತ್ತು ವಿಚಾರಗಳಲ್ಲಿ ಮಾತ್ರ ನಾವು ಕ್ರೈಸ್ತರಾದರೆ ಸಾಲದು; ಕ್ರೈಸ್ತ ಜೀವನವು ಕ್ರಿಸ್ತರೊಂದಿಗೆ ಒಂದಾಗಿರಬೇಕಾದ ಜೀವನವಾಗಿದೆ. ಈ ಜೀವನದಲ್ಲಿ ನಾವು ಪವಿತ್ರಾತ್ಮರಲ್ಲಿ ಪ್ರಭು ಯೇಸು ತಮ್ಮ ತಂದೆಯೊಂದಿಗೆ ಹೊಂದಿರುವ ಬಾಂಧವ್ಯದಲ್ಲಿ ಭಾಗಿಗಳಾಗುತ್ತೇವೆ. ಅಂದರೆ ದ್ರಾಕ್ಷಾಬಳ್ಳಿಯ ಕವಲುಗಳಂತೆ ಕ್ರಿಸ್ತರಲ್ಲಿ ನೆಲೆಗೊಂಡು (ಯೊವಾನ್ನ 15:4), ಪರಮ ತ್ರಿತ್ವದ ಜೀವನದಲ್ಲಿ ವಿಲೀನಗೊಳ್ಳುತ್ತೇವೆ. ಈ ಐಕ್ಯತೆಯು ವಿಶ್ವಾಸಿಗಳೆಲ್ಲರ ಮಧ್ಯೆ ಪರಸ್ಪರ ಬಾಂಧವ್ಯವನ್ನು ಉಂಟುಮಾಡುತ್ತದೆ ಮತ್ತು ಅದು ಸುವಾರ್ತ ಸೇವೆಯ ಸಫಲತೆಗೆ ಮೂಲಾಧಾರವಾಗಿದೆ. ಇದನ್ನೇ **ದ್ವಿತೀಯ ಸಂತ**

ಜಾನ್ ಪೌಲ್ ರವರು "ಬಾಂಧವ್ಯವು ಸುವಾರ್ತ ಸೇವೆಯ ಮೂಲ ಮತ್ತು ಸಫಲತೆಯನ್ನು ಸೂಚಿಸುತ್ತದೆ" ಎನ್ನುತ್ತಾರೆ. (Apostolic Exhortation Christifideles Laici, 32).

ಈ ದಿಸೆಯಲ್ಲಿ ಧರ್ಮಸಭೆಯ ಪ್ರಾಥಮಿಕ ಸೇವಾ ಜವಾಬ್ದಾರಿ ಯಾವುದೆಂದರೆ, ತನ್ನ ಸದಸ್ಯರ ಮಧ್ಯೆ ಆಧ್ಯಾತ್ಮಿಕ ಮತ್ತು ಭ್ರಾತೃತ್ವ ಐಕ್ಯತೆಯನ್ನು ನವೀಕರಿಸಿ ಅದನ್ನು ಪೋಷಿಸುವುದು. ಅನೇಕ ಸಂದರ್ಭಗಳಲ್ಲಿ ನಾವು ಘರ್ಷಣೆಗಳನ್ನು, ಧ್ರುವೀಕರಣವನ್ನು, ಅಪಾರ್ಥಗಳನ್ನು ಉಂಟು ಮಾಡುವ ಸನ್ನಿವೇಶಗಳನ್ನು ಮತ್ತು ಪರಸ್ಪರ ಅಪನಂಬಿಕೆಗಳನ್ನು ಎದುರಿಸುತ್ತೇವೆ. ಇಂತಹ ಪರಿಸ್ಥಿತಿಯು ನಮ್ಮ ನಮ್ಮ ಸಮುದಾಯಗಳೊಳಗೆ ಸಂಭವಿಸಿದರೂ ಅದು ನಮ್ಮ ಸಾಕ್ಷ್ಯ ಜೀವನಕ್ಕೆ ಭಂಗ ತರುತ್ತದೆ. ಪ್ರಭು ಕ್ರಿಸ್ತರು ತಮ್ಮ ಶಿಷ್ಯರಿಗೆ ಒಪ್ಪಿಸಿರುವ ಸುವಾರ್ತ ಪ್ರಸಾರ ಸೇವಾ ಕಾರ್ಯಕ್ಕೆ ರಾಜಿಸಂಧಾನಕ್ಕೆ ಸಿದ್ಧರಿರುವ ಮತ್ತು ಬಾಂಧವ್ಯವನ್ನು ಬೆಳೆಸಲು ಕಾತರರಾಗಿರುವ ಶಿಷ್ಯವೃಂದ ಅಗತ್ಯವಾಗಿ ಬೇಕು. ಆದುದರಿಂದ ನೈಸೇಯ (Nicaea) ಸಮ್ಮೇಳನದ 1700ನೇ ವರ್ಷದ ಜಂಟಿ ಆಚರಣೆಯ ಸದವಕಾಶಗಳನ್ನು ಬಳಸಿಕೊಂಡು ಎಲ್ಲಾ ಕ್ರೈಸ್ತ ಸಭೆಗಳೊಂದಿಗೆ ಐಕ್ಯತೆಯನ್ನು ಸಾಧಿಸುವ ಪ್ರಯತ್ನಗಳನ್ನು ತೀವ್ರಗೊಳಿಸುವ ಅಗತ್ಯ ಇಂದು ಎದ್ದು ಕಾಣುತ್ತಿದೆ.

ಕೊನೆಯದಾಗಿ, ಆದರೆ ಮುಖ್ಯವಾಗಿ, "ಕ್ರಿಸ್ತರಲ್ಲಿ ಒಂದಾಗುವುದು ಎಂದರೆ ನಮ್ಮ ಗಮನವನ್ನು ಕ್ರಿಸ್ತರ ಮೇಲೆ ಕೇಂದ್ರೀಕರಿಸುವುದು. ಈ ಮೂಲಕ ಅವರೇ ನಮ್ಮ ಬಾಳಿನ ಹಾಗೂ ನಮ್ಮ ಸಮುದಾಯಗಳ ಕೇಂದ್ರವಾಗಬೇಕು, ಅಂದರೆ ನಮ್ಮ ಪ್ರತಿಯೊಂದು ಮಾತು, ಕ್ರಿಯೆ ಮತ್ತು ಪರಸ್ಪರ ಸಂಬಂಧಗಳು ಕ್ರಿಸ್ತಕೇಂದ್ರಿತವಾಗಬೇಕು, ಆಗ ನಾವು ಬೆರಗಾಗಿ ಹೇಳುವಂತಾಗಬೇಕು: "ಈಗ ಜೀವಿಸುವವನು ನಾನಲ್ಲ, ಕ್ರಿಸ್ತಯೇಸು ನನ್ನಲ್ಲಿ ಜೀವಿಸುತ್ತಾರೆ" (ಗಲಾತ್ಯರಿಗೆ 2:20). ಕ್ರಿಸ್ತರ ನುಡಿಗಳನ್ನು ಸತತ ಆಲಿಸುವುದರ ಮೂಲಕ ಮತ್ತು ಸಂಸ್ಕಾರಗಳು ನಮಗೆ ನೀಡುವ ಕೃಪೆಯ ಮೂಲಕ ನಾವು ಧರ್ಮಸಭೆಯ ಜೀವಂತ ಶಿಲೆಗಳಾಗಲು ಶಕ್ತರಾಗುತ್ತೇವೆ. ಇಂದು ಧರ್ಮಸಭೆಯು ದ್ವಿತೀಯ ವ್ಯಾಟಿಕನ್ ಸಮ್ಮೇಳನದ ಮೂಲ ತತ್ವಗಳನ್ನು, ಅವುಗಳನ್ನು ವಿಶದಪಡಿಸುವ ವಿಶ್ವಗುರುಗಳ ಬೋಧನೆಗಳನ್ನು ಅದರಲ್ಲೂ ವಿಶ್ವಗುರು ಫ್ರಾನ್ಸಿಸರ ಬೋಧನೆಗಳನ್ನು ಪಾಲಿಸಬೇಕಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸಂತ ಪೌಲರು, "ನಾವು ನಮ್ಮನ್ನೇ ಕುರಿತು ಪ್ರಚಾರ ಮಾಡುತ್ತಿಲ್ಲ. ಆದರೆ ಕ್ರಿಸ್ತ ಯೇಸುವೇ ಪ್ರಭುವೆಂದೂ ಪ್ರಚಾರ ಪಡಿಸುತ್ತಿದ್ದೇವೆ" ಎಂದು ನುಡಿಯುತ್ತಾರೆ. (2 ಕೊರಿಂಥಿಯರಿಗೆ 4:5). ಈ ಕಾರಣದಿಂದ ನಾನು ವಿಶ್ವಗುರು 6ನೇ ಸಂತ ಪೌಲರ ನುಡಿಗಳನ್ನು ಇಲ್ಲಿ ಉಲ್ಲೇಖಿಸುತ್ತಿದ್ದೇನೆ: "ದೇವಪುತ್ರ ನಜರೇತಿನ ಪ್ರಭು ಯೇಸುವಿನ ಹೆಸರು, ಬೋಧನೆ, ಜೀವನ, ವಾಗ್ದಾನಗಳು, ದೈವೀರಾಜ್ಯ ಹಾಗೂ ರಹಸ್ಯಗಳನ್ನು ಸಾರದಿದ್ದರೆ ನೈಜ ಸುವಾರ್ತ ಪ್ರಸಾರ ಕಾರ್ಯವು ಇರುವುದಿಲ್ಲ" (Apostolic Exhortation Evangelii Nuntiandi 22). ನೈಜ ಸುವಾರ್ತ ಪ್ರಸಾರ ಕಾರ್ಯದ ಈ ಪ್ರಕ್ರಿಯೆಯು ಪ್ರತಿ ಕ್ರೈಸ್ತನ ಹೃದಯದಿಂದ ಆರಂಭವಾಗಿ ಇಡೀ ಮನುಷ್ಯ ಕುಲಕ್ಕೆ ತಲುಪುತ್ತದೆ.

ಈ ಕಾರಣದಿಂದ ನಾವು ಕ್ರಿಸ್ತರೊಂದಿಗೆ ಒಂದಾಗಿದ್ದಷ್ಟೂ ಅವರು ನಮಗೆ ವಹಿಸಿರುವ ಸುವಾರ್ತ ಸೇವೆಯ ಜವಾಬ್ದಾರಿಯನ್ನು ಜೊತೆ ಜೊತೆಯಾಗಿ ನಿರ್ವಹಿಸಲು ಶಕ್ತರಾಗುತ್ತೇವೆ.

2. *ಸುವಾರ್ತ ಸೇವೆಯಲ್ಲಿ ಐಕ್ಯತೆಯನ್ನು ಸಾಧಿಸೋಣ - ಈ ಮೂಲಕ ಲೋಕವು ಪ್ರಭು ಕ್ರಿಸ್ತನನ್ನು ವಿಶ್ವಾಸಿಸಲಿ.*

ಪ್ರಭು ಯೇಸುವಿನ ಶಿಷ್ಯರ ಐಕ್ಯತೆಯು ಕೇವಲ ಐಕ್ಯತೆ ಮಾತ್ರವಲ್ಲ, ಈ ಐಕ್ಯತೆಯು ಸುವಾರ್ತ ಪ್ರಸಾರ ಸೇವೆಗಾಗಿ ಒಂದಾಗುವ ಐಕ್ಯತೆ. ಪ್ರಭು ಯೇಸು ಇದನ್ನು ಸ್ಪಷ್ಟವಾಗಿ ಹೇಳಿದ್ದಾರೆ: "ಹೀಗೆ ನನ್ನನ್ನು ಕಳುಹಿಸಿದವರು ನೀವೇ ಎಂದು ಲೋಕವು ವಿಶ್ವಾಸಿಸುವಂತಾಗಲಿ" (ಯೋವಾನ್ನ 17:21). ರಾಜಿ ಸಂಧಾನ, ಭ್ರಾತೃತ್ವ ಮತ್ತು ಐಕ್ಯತೆಯಿಂದ ಕೂಡಿದ ಸಮುದಾಯದಿಂದ ಮಾತ್ರ ಸುವಾರ್ತ ಪ್ರಸಾರ ಕಾರ್ಯವು ಪೂರ್ಣ ಪ್ರಮಾಣದ ಸಂಹವನಾ ಹಾಗೂ ಸಾಮರ್ಥ್ಯವನ್ನು ಪಡೆಯುತ್ತದೆ.

ಈ ದಿಸೆಯಲ್ಲಿ ಪುನೀತ ಪೋಲೊ ಮಾನ್ನರವರ "ಲೋಕದಲ್ಲಿರುವ ಸರ್ವರ ಪರಿವರ್ತನೆಗಾಗಿ ಐಕ್ಯತೆಯನ್ನು ಸಾಧಿಸಬೇಕಾಗಿರುವ ಎಲ್ಲಾ ಕ್ರೈಸ್ತ ಸಭೆಗಳು" ಎಂಬ ಆದರ್ಶ ವಾಕ್ಯವನ್ನು ನಾವು ಗಮನಿಸಬೇಕು. ಈ ಆದರ್ಶವೇ 1916ರಲ್ಲಿ "ಪೊಂಟಿಫಿಕಲ್ ಮಿಶನರಿ ಯೂನಿಯನ್" ಎಂಬ ಸಂಘಟನೆಯ ಉಗಮಕ್ಕೆ ಪ್ರೇರಣೆಯನ್ನು ಒದಗಿಸಿತು. ಈ ಸಂಘಟನೆಯ 110ನೇ ವಾರ್ಷಿಕ ದಿನಾಚರಣೆಯ ಸಂದರ್ಭದಲ್ಲಿ ಯಾಜಕರಲ್ಲಿ ಧಾರ್ಮಿಕ ಸಹೋದರ ಸಹೋದರಿಯರಲ್ಲಿ ಹಾಗೂ ದೈವೀ ಪ್ರಜೆಗಳಲ್ಲಿ ಸುವಾರ್ತ ಸೇವೆಯ ಶ್ರದ್ದೆಯನ್ನು ಮೂಡಿಸಿ ಅದಕ್ಕೆ ಪ್ರೇರಣೆ ನೀಡಿ ಈ ಮೂಲಕ ಎಲ್ಲಾ ಸುವಾರ್ತ ಸೇವೆಯ ಕಾರ್ಯಗಳ ಮಧ್ಯೆ ಐಕ್ಯತೆಯನ್ನು ಸಾಧಿಸುವ ಪ್ರಯತ್ನಗಳಿಗೆ ಉತ್ತೇಜನ ನೀಡಿದ್ದಕ್ಕಾಗಿ ನಾನು ಈ ಸಂಘಟನೆಗೆ ನನ್ನ ಕೃತಜ್ಞತೆಗಳನ್ನು, ಆಶೀರ್ವಾದವನ್ನೂ ದಯಪಾಲಿಸುತ್ತೇನೆ. ಏಕೆಂದರೆ ದೀಕ್ಷಾಸ್ನಾನ ಸ್ವೀಕರಿಸಿರುವ ಯಾವ ವ್ಯಕ್ತಿಯೂ ಸುವಾರ್ತ ಸೇವೆಯಿಂದ ವಿನಾಯಿತಿ ಪಡೆಯುವಂತಿಲ್ಲ ಹಾಗೂ ಈ ಕಾರ್ಯವನ್ನು ಉಪೇಕ್ಷಿಸುವಂತಿಲ್ಲ. ಪ್ರತಿಯೊಬ್ಬರೂ ಅವರವರ ಕರೆಗನುಸಾರ ಮತ್ತು ವೃತ್ತಿಗನುಸಾರ ಪ್ರಭು ಯೇಸು ತನ್ನ ಧರ್ಮಸಭೆಗೆ ವಹಿಸಿರುವ ಸುವಾರ್ತ ಸೇವೆಯ ಜವಾಬ್ದಾರಿಯಲ್ಲಿ ಭಾಗವಹಿಸುತ್ತಾರೆ. ವಿಶ್ವಗುರು ಫ್ರಾನ್ಸಿಸರು ನಮ್ಮನ್ನು ಪದೇ ಪದೇ ಎಚ್ಚರಿಸಿದಂತೆ ಸುವಾರ್ತ ಪ್ರಸಾರ ಕಾರ್ಯವು ಯಾವಾಗಲೂ ಸುಮಧುರ, ಸಮುದಾಯ ಕೇಂದ್ರಿತ ಮತ್ತು ಸಿನೊಡ್ ಮಾದರಿಯ ಅನುಭವವಾಗಿರುತ್ತದೆ.

ಈ ಕಾರಣದಿಂದ ಸುವಾರ್ತ ಸೇವೆಯಲ್ಲಿ ಐಕ್ಯತೆಯನ್ನು ಸಾಧಿಸುವುದು ಎಂದರೆ ಪರಸ್ಪರ ಬಾಂಧವ್ಯದ ಆಧ್ಯಾತ್ಮಿಕತೆಯನ್ನು ಮತ್ತು ಸುವಾರ್ತ ಸೇವಾ ಸಹಕಾರವನ್ನು ಸಂರಕ್ಷಿಸುವುದು ಹಾಗೂ ಪೋಷಿಸುವುದು. ಪ್ರತಿದಿನವೂ ನೀವು ಈ ಮನೋಭಾವವನ್ನು ನಮ್ಮದ್ದನ್ನಾಗಿ ಮಾಡುವಾಗ ದೈವೀಕೃಪೆಯು ನಮ್ಮ ಸಹೋದರ ಸಹೋದರಿಯರನ್ನು ನಾವು ವಿಶ್ವಾಸದ ಕಣ್ಣುಗಳಿಂದ ನೋಡಲು ಹಂತಹಂತವಾಗಿ ನಮಗೆ ಕಲಿಸುತ್ತದೆ. ಅಂತೆಯೇ ಪ್ರತಿಯೊಬ್ಬರಲ್ಲೂ ಪವಿತ್ರಾತ್ಮರು ಪ್ರೇರೇಪಿಸುವ ಒಳಿತನ್ನು ಸಂತೋಷದಿಂದ ಗುರುತಿಸಲು, ವೈವಿಧ್ಯತೆಯನ್ನು ಒಂದು ನಿಧಿಯಂತೆ ಅಂಗೀಕರಿಸಲು, ಪರಸ್ಪರರ ಭಾರವನ್ನು ಹೊರಲು ಮತ್ತು ದೇವರಿಂದ ನಮಗೆ ಲಭ್ಯವಾಗುವ ಐಕ್ಯತೆಯನ್ನು ಬಯಸಲು ನಾವು ಕಲಿಯುತ್ತೇವೆ. ಏಕೆಂದರೆ ನಾವೆಲ್ಲರೂ ಒಂದೇ ಸುವಾರ್ತ ಸೇವೆಯಲ್ಲಿ ಪಾಲುದಾರರಾಗಿದ್ದೇವೆ. "ನಮ್ಮೆಲ್ಲರಿಗೂ ಪ್ರಭು ಒಬ್ಬರೇ; ವಿಶ್ವಾಸವೂ ಒಂದೇ; ದೀಕ್ಷಾಸ್ನಾನವೂ ಒಂದೇ; ದೇವರು ಒಬ್ಬರೇ; ಸರ್ವರ ತಂದೆಯು ಅವರೇ; ಸರ್ವ ಶ್ರೇಷ್ಠರೂ ಅವರೇ; ಸರ್ವರ ಮೂಲಕ ಕಾರ್ಯ ನಿರ್ವಹಿಸುವವರೂ ಅವರೇ ಮತ್ತು ಸಮಸ್ತರಲ್ಲಿ ವಾಸಿಸುವವರು ಅವರೇ" (ಎಫೆಸಿಯರಿಗೆ 4:5-6). ಈ ಆಧ್ಯಾತ್ಮಿಕತೆಯು ಸುವಾರ್ತ ಸೇವಾ-ಶಿಷ್ಯವೃಂದದ ಅನುದಿನದ ಬಾಳು ದೀವಿಗೆಯಾಗಿದೆ. ಇದು ಧರ್ಮಸಭೆಯ ಸುವಾರ್ತ ಪ್ರಸಾರ ಕಾರ್ಯದ ವಿಶ್ವವ್ಯಾಪಿ ದರ್ಶನವನ್ನು ನಾವು ಮರಳಿ ಪಡೆಯಲು ನಮಗೆ ನೆರವಾಗುತ್ತದೆ ಮತ್ತು ನಮ್ಮಲ್ಲಿರುವ ಸಮನ್ವಯತೆಯ ಕೊರತೆಗಳನ್ನು ನೀಗಿಸಿಕೊಳ್ಳಲು ದಾರಿ ತೋರಿಸುತ್ತದೆ. ಮಾತ್ರವಲ್ಲದೆ "ತಾನು ಪೌಲನ ಕಡೆಯವನು, ತಾನು ಅಪೊಲೋಸನ ಕಡೆಯವನು," (1 ಕೊರಿಂಥಿಯರಿಗೆ 1:10-12) ಎಂಬ ಒಂದೇ ಪ್ರಭುವಿನ ಹಿಂಬಾಲಕರ ಮಧ್ಯೆ ಇರುವ ಗುಂಪುಗಾರಿಕೆಯಿಂದ ಮುಕ್ತರಾಗಲು ನಮಗೆ ಮಾರ್ಗದರ್ಶನ ನೀಡುತ್ತದೆ.

ಸುವಾರ್ತ ಸೇವೆಯ ಐಕ್ಯತೆಯನ್ನು ನಾವು ಏಕರೂಪತೆ ಎಂದು ತಿಳಿದುಕೊಳ್ಳಬಾರದು. ಆದರೆ ಒಂದೇ ಉದ್ದೇಶಕ್ಕಾಗಿ ಹಲವಾರು ವರದಾನಗಳು ಜೊತೆಗೂಡುವುದು ಎಂದು ನಾವು ಅರ್ಥೈಸಿಕೊಳ್ಳಬೇಕು; ಅಂದರೆ ಪ್ರಭು ಕ್ರಿಸ್ತರ ಪ್ರೀತಿಯನ್ನು ಸಾದರಪಡಿಸಿ ಪ್ರತಿಯೊಬ್ಬರನ್ನೂ ಅವರೆಡೆಗೆ ಬರಮಾಡಿಕೊಳ್ಳಲು ಜೊತೆಗೂಡುವುದು. ಸ್ಥಳೀಯ ಸಮುದಾಯಗಳು ಪರಸ್ಪರ ಸಹಕರಿಸುವಾಗ ಹಾಗೂ ಸಾಂಸ್ಕೃತಿಕ, ಆಧ್ಯಾತ್ಮಿಕ ಮತ್ತು ಆರಾಧನಾವಿಧಿಗೆ ಸಂಬಂಧಿಸಿದ ಭಿನ್ನತೆಗಳನ್ನು ಒಂದೇ ವಿಶ್ವಾಸದಲ್ಲಿ ಪೂರ್ಣ ಪ್ರಮಾಣದಲ್ಲಿ ಮತ್ತು ಸುಮಧುರವಾಗಿ ವ್ಯಕ್ತಪಡಿಸಿದಾಗ ಸುವಾರ್ತ ಪ್ರಸಾರ ಕಾರ್ಯವು ನೆರವೇರುವುದು. ಸುವಾರ್ತ ಪ್ರಸಾರ ಬಾಂಧವ್ಯವನ್ನು ಬಲಪಡಿಸುವಂತೆ ಮತ್ತು ಸುವಾರ್ತ ಸೇವೆಗಾಗಿ ಮತ್ತು ಸುವಾರ್ತ ಸೇವೆಯಲ್ಲಿ ಪರಸ್ಪರ ಸಹಕರಿಸುವ ಸೃಜನಾತ್ಮಕ ಮತ್ತು ಕಾರ್ಯಸಾಧ್ಯವಾದ

ದಾರಿಗಳನ್ನು ಕಂಡುಕೊಳ್ಳುವಂತೆ ನಾನು ಧರ್ಮಸಭೆಯ ಎಲ್ಲಾ ಸಂಸ್ಥೆ-ಸಂಘಟನೆಗಳಿಗೆ ಕರೆ ನೀಡುತ್ತೇನೆ.

ಈ ದಿಸೆಯಲ್ಲಿ ನಾನು ಪೆರುವಿನಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ನನಗೆ ಸುವಾರ್ತೆ ಪ್ರಸಾರ ಕಾರ್ಯದಲ್ಲಿ ನೆರವಾದ ಪಾಂಟಿಫಿಕಲ್ ಮಿಷನ್ ಸೊಸೈಟಿಗಳನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿ ಅವುಗಳಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಸಂಸ್ಥೆಗಳಾಗಿರುವ ಪ್ರೊಪಗೇಶನ್ ಆಫ್ ದ ಫೈತ್, ಹೋಲಿ ಚೈಲ್ಡ್‌ಹುಡ್, ಸೊಸೈಟಿ ಆಫ್ ಸೇಂಟ್ ಪೀಟರ್ ದಿ ಅಪೋಸ್ತಲ್ ಮತ್ತು ಪಾಂಟಿಫಿಕಲ್ ಮಿಷನರಿ ಯೂನಿಯನ್ - ಇವು ಹಿಂದಿನಿಂದಲೂ ದೈವೀಪ್ರಜೆಗಳಲ್ಲಿ ಸುವಾರ್ತೆ ಪ್ರಸಾರವನ್ನು ಕುರಿತು ಜಾಗೃತಿಯನ್ನು ಮೂಡಿಸುತ್ತಾ ಬಂದಿವೆ. ಮಾತ್ರವಲ್ಲದೆ ವಿಶ್ವದಾದ್ಯಂತ ಸಮುದಾಯಗಳನ್ನು ಜೊತೆಗೂಡಿಸುವ ಪ್ರಾರ್ಥನೆ ಹಾಗೂ ಪರಸೇವಾಕಾರ್ಯಗಳನ್ನು ಪ್ರೋತ್ಸಾಹಿಸುತ್ತಾ ಬಂದಿವೆ. ಇಲ್ಲಿ "ಸೊಸೈಟಿ ಆಫ್ ಪ್ರೊಪಗೇಶನ್ ಆಫ್ ದ ಫೈತ್" ಸಂಸ್ಥೆಯನ್ನು ಸ್ಥಾಪಿಸಿದ ಪುನೀತ ಪೌಲಿನ್ ಮರಿಯಾ ಜಾರಿಕೋಟ್ ರವರು ಇನ್ನೂರು ವರ್ಷಗಳ ಹಿಂದೆ ಆರಂಭಿಸಿದ ಜೀವಂತ ಜಪಸರವನ್ನು ನಾವು ಸ್ಮರಿಸಿಕೊಳ್ಳಬೇಕು. ಇಂದು ಸಹ ಈ ಜಪಸರವು ವಿಶ್ವದಾದ್ಯಂತ ಇರುವ ಅಸಂಖ್ಯಾತ ವಿಶ್ವಾಸಿಗಳನ್ನು ಆಧ್ಯಾತ್ಮಿಕ ಮತ್ತು ಸುವಾರ್ತೆ ಪ್ರಸಾರಕಾರ್ಯದ ಅವಶ್ಯಕತೆಗಳಿಗಾಗಿ ಪ್ರಾರ್ಥಿಸಲು ಒಂದುಗೂಡಿಸುತ್ತಿದೆ. ಈ ಸಂದರ್ಭದಲ್ಲಿ ನಾವು ಸ್ಮರಿಸಿಕೊಳ್ಳಬೇಕಾಗಿರುವ ಒಂದು ವಿಶೇಷವಾದ ಘಟನೆ ಏನೆಂದರೆ 1926ರಲ್ಲಿ ಸೊಸೈಟಿ ಆಫ್ ಪ್ರೊಪಗೇಶನ್ ಆಫ್ ದ ಫೈತ್ ಸಂಸ್ಥೆಯ ಕೋರಿಕೆಯ ಮೇರೆಗೆ ವಿಶ್ವಗುರು

11ನೇ ಪಯಸ್ ರವರು ವಿಶ್ವ ಸುವಾರ್ತೆ ದಿನಾಚರಣೆಯನ್ನು ಆರಂಭಿಸಿದರು. ಈ ದಿನಾಚರಣೆಯಂದು ಸಂಗ್ರಹವಾದ ಕಾಣಿಕೆಗಳನ್ನು ವಿಶ್ವಗುರುಗಳ ಪರವಾಗಿ ಈ ಸಂಸ್ಥೆಯು ಧರ್ಮಸಭೆಯ ಸುವಾರ್ತೆ ಪ್ರಸಾರದ ಸೇವೆಯ ವಿವಿಧ ಅವಶ್ಯಕತೆಗಳಿಗಾಗಿ ಹಂಚುತ್ತದೆ. ಈ ನಾಲ್ಕು ಸಂಸ್ಥೆಗಳು ಒಂದಾಗಿ ಅಥವಾ ಪ್ರತಿ ಸಂಸ್ಥೆಯು ತನ್ನದೇ ಆಗಿರುವ ಧ್ಯೇಯೋದ್ದೇಶಕ್ಕಾಗಿ ವಿಶ್ವ ಧರ್ಮಸಭೆಗೆ ತಮ್ಮ ಅಮೂಲ್ಯವಾದ ಸೇವೆಯನ್ನು ಸಲ್ಲಿಸುತ್ತಿವೆ. ಇವು ಐಕ್ಯತೆಯ ಜೀವಂತ ಚಿಹ್ನೆಗಳಾಗಿ ಮತ್ತು ಧರ್ಮಸಭೆಯ ಸುವಾರ್ತೆ ಸೇವೆಯ ಬಾಂಧವ್ಯದ ಪ್ರತೀಕಗಳಾಗಿ ಕಾರ್ಯನಿರ್ವಹಿಸುತ್ತವೆ. ಈ ಸಂಸ್ಥೆಗಳೊಂದಿಗೆ ಕೃತಜ್ಞತಾಭಾವದಿಂದ ವ್ಯವಹರಿಸಲು ನಾನು ಪ್ರತಿಯೊಬ್ಬರಿಗೂ ಮನವಿ ಮಾಡುತ್ತಿದ್ದೇನೆ.

3. *ಪ್ರೀತಿ ಪ್ರಧಾನ ಸುವಾರ್ತಾಸೇವೆ - ದೇವರ ಪ್ರಾಮಾಣಿಕ ಪ್ರೀತಿಯನ್ನು ಸಾರುವುದು, ಬಾಳುವುದು ಹಾಗೂ ಹಂಚಿಕೊಳ್ಳುವುದು.*

ಐಕ್ಯತೆಯು ಸುವಾರ್ತಸೇವೆಯ ಗುಣಲಕ್ಷಣವಾದರೆ, ಪ್ರೀತಿಯು ಅದರ ಅಂತ:ಸ್ಸತ್ವವಾಗಿದೆ. ನಾವು ವಿಶ್ವಕ್ಕೆ ಸುವಾರ್ತೆ ಸಾರಲು ಕಳುಹಿಸಲ್ಪಟ್ಟಿದ್ದೇವೆ. ಈ ಸುವಾರ್ತೆಯು ಒಂದು ಒಣ ಸಿದ್ಧಾಂತವಲ್ಲ, ಬದಲಾಗಿ ಈ ಸುವಾರ್ತೆಯು ಪ್ರಭು ಯೇಸು ಕ್ರಿಸ್ತರಲ್ಲಿ ಮನುಷ್ಯ ಸ್ವಭಾವವನ್ನು ತಾಳಿದ ದೇವರ ಪ್ರಾಮಾಣಿಕ ಪ್ರೀತಿಯೇ ಆಗಿದೆ.

ಸುವಾರ್ತೆ ಸೇವಾ ಶಿಷ್ಯವೃಂದದ ಹಾಗೂ ಅಖಿಲ ಧರ್ಮಸಭೆಯ ಸುವಾರ್ತಸೇವೆಯು ಪವಿತ್ರಾತ್ಮರಲ್ಲಿ ಪ್ರಭು ಯೇಸುಕ್ರಿಸ್ತರ ಸುವಾರ್ತಸೇವೆಯನ್ನು ಮುಂದುವರಿಸುವುದಾಗಿದೆ; ಅಂದರೆ ಪ್ರೀತಿಯಲ್ಲಿ ಜನ್ಮತಾಳಿ, ಪ್ರೀತಿಯನ್ನೇ ಜೀವನವಾಗಿಸಿಕೊಂಡು ಪ್ರೀತಿಯ ಪರಿಪೂರ್ಣತೆಯೆಡೆಗೆ ಸಾಗುವುದು. ಪ್ರಭು ಯೇಸುವೇ ತಮ್ಮ ಯಾತನೆಗೆ ಮೊದಲು ತಮ್ಮ ತಂದೆಯೊಂದಿಗೆ ಅವರು ಮಾಡಿದ ಮಹಾ ಪ್ರಾರ್ಥನೆಯಲ್ಲಿ, ತಮ್ಮ ಶಿಷ್ಯರ ಐಕ್ಯತೆಗಾಗಿ ಮನವಿ ಮಾಡಿದ ನಂತರ, ಪ್ರಾರ್ಥನೆಯನ್ನು ಈ ಪರಿ ಕೊನೆಗೊಳಿಸುತ್ತಾರೆ: "ಹೀಗೆ ನೀವು ನನ್ನಲ್ಲಿಟ್ಟ ಪ್ರೀತಿಯು ಇವರಲ್ಲಿಯೂ ಇರುವಂತಾಗುವುದು; ನಾನು ಅವರಲ್ಲಿ ಇರುವಂತಾಗುವುದು." (ಯೋವಾನ್ನ 17:26) ಕ್ರಿಸ್ತರ ಈ ಪ್ರೀತಿಯ ಪ್ರಭಾವಕ್ಕೆ ಒಳಗಾಗಿ ಪ್ರೇಷಿತರು ಪ್ರಭು ಕ್ರಿಸ್ತರಿಗಾಗಿ ಸುವಾರ್ತೆ ಪ್ರಸಾರ ಕಾರ್ಯವನ್ನು ಕೈಗೊಂಡರು. (2 ಕೊರಿಂಥಿಯರಿಗೆ 5:14) ಇದೇ ರೀತಿಯಲ್ಲಿ ಶತಶತಮಾನಗಳಿಂದ ರಕ್ತ ಸಾಕ್ಷಿಗಳು, ಧರ್ಮಪಾಲಕರು, ಸುವಾರ್ತೆ

ಪ್ರಸಾರಕರು ಮತ್ತು ಅಸಂಖ್ಯಾತ ಕ್ರೈಸ್ತರು ಈ ದೈವಿಕ ಪ್ರೀತಿಯನ್ನು ವಿಶ್ವದಾದ್ಯಂತ ಪಸರಿಸಲು ತಮ್ಮ ಜೀವನವನ್ನೇ ಧಾರೆಯೆರೆದರು. ಹೀಗೆ ಪ್ರೀತಿಯ ಆತ್ಮವಾಗಿರುವ ಪವಿತ್ರಾತ್ಮರ ಪ್ರೇರಣೆಯಿಂದ ಧರ್ಮಸಭೆಯ ಸುವಾರ್ತಸೇವೆಯ ಕಾರ್ಯವು ಲೋಕಾಂತ್ಯದವರೆಗೂ ಮುಂದುವರಿಯುತ್ತದೆ.

ಇಂದು ಜನಾಂಗಗಳ ಮಧ್ಯೆ ಸುವಾರ್ತ ಸೇವೆಯ ಕಾರ್ಯದಲ್ಲಿ ನಿರತರಾಗಿರುವವರಿಗೆ ನಾನು ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸಂತ ಫ್ರಾನ್ಸಿಸ್ ಕ್ಸೇವಿಯರ್‌ರವರಂತೆ ಅವರು ತಮ್ಮ ಸ್ವಂತ ತಾಯ್ನಾಡನ್ನು, ಕುಟುಂಬಗಳನ್ನು ತ್ಯಜಿಸಿ, ಸ್ವರಕ್ಷಣೆಯನ್ನು ಲೆಕ್ಕಿಸದೆ, ದುರ್ಗಮವಾದ, ಬಡತನದಿಂದ ಕೂಡಿದ, ಘರ್ಷಣೆನೆಗಳಿಂದ ಕೂಡಿದ ಅಥವಾ ಭಿನ್ನ ಸಂಸ್ಕೃತಿಗಳಿಗೆ ಸೇರಿದ ಜನಾಂಗಗಳಿಗೆ ಸುವಾರ್ತೆಯನ್ನು ಸಾರುತ್ತಿದ್ದಾರೆ. ವಿಪತ್ತುಗಳನ್ನು ಹಾಗೂ ಕೊರತೆಗಳನ್ನು ಲೆಕ್ಕಿಸದೆ ಅವರು ಸಂತೋಷದಿಂದ ತಮ್ಮನ್ನೇ ಸಮರ್ಪಿಸುತ್ತಿದ್ದಾರೆ, ಏಕೆಂದರೆ ಸ್ವತಹ ಪ್ರಭು ಯೇಸುಕ್ರಿಸ್ತರು ಮತ್ತು ಅವರ ಶುಭ ಸಂದೇಶ–ಇವುಗಳೇ ನಾವು ನೀಡಬೇಕಾಗಿರುವ ಸರ್ವೋತ್ತಮವಾದ ನಿಧಿಗಳು ಎಂಬುದನ್ನು ಅವರು ಅರಿತುಕೊಂಡಿದ್ದಾರೆ. ದೇವರ ಪ್ರೀತಿಯು ಎಲ್ಲಾ ಅಡ್ಡಿ ಆತಂಕಗಳಿಗಿಂತಲೂ ಮೇಲಾದದ್ದು ಎಂಬುದನ್ನು ಅವರ ಸದೃಢ ನಿಲುವು ಸಾಬಿತುಪಡಿಸುತ್ತದೆ. ಕ್ರಿಸ್ತರಿಗಾಗಿ ಧೈರ್ಯದಿಂದ ಸಾಕ್ಷಿ ನೀಡುವ ಇಂತಹ ಸುವಾರ್ತ ಪ್ರಸಾರಕರ ಅಗತ್ಯ ಪ್ರಪಂಚಕ್ಕೆ ಇನ್ನೂ ಇದೆ. ಹಾಗೂ ಧರ್ಮಸಭೆಯ ಸಮುದಾಯಗಳಿಗೆ ಸುವಾರ್ತ ಸೇವೆಗಾಗಿ ತಮ್ಮನ್ನೇ ಸಮರ್ಪಿಸಿಕೊಡುವ ದೈವೀಕರೆಗಳ ಅಗತ್ಯ ಇನ್ನೂ ಇದೆ. ಇವರೆಲ್ಲರನ್ನೂ ನಾವು ಸಹೃದಯದಿಂದ ಸ್ಮರಿಸಿಕೊಂಡು ಇವರಿಗಾಗಿ ನಿರಂತರ ತಂದೆಯೊಂದಿಗೆ ಪ್ರಾರ್ಥಿಸಬೇಕು. ಅವರು ನಮಗೆ ಕ್ರಿಸ್ತರಿಗಾಗಿ ಸರ್ವಸ್ವವನ್ನೂ ತ್ಯಜಿಸಿ ಪ್ರಪಂಚದ ಮೂಲೆ ಮೂಲೆಗಳಿಗೂ ತೆರಳಿ ಸುವಾರ್ತ ಪ್ರಸಾರ ಕಾರ್ಯವನ್ನು ಕೈಗೊಳ್ಳುವ ಯುವಜನರನ್ನೂ, ವಯಸ್ಕರನ್ನೂ ದಯಪಾಲಿಸಲಿ.

ಸುವಾರ್ತ ಪ್ರಸಾರ ಕಾರ್ಯದಲ್ಲಿ ನಿರತರಾಗಿರುವ ಎಲ್ಲಾ ಸ್ತ್ರೀ-ಪುರುಷರನ್ನೂ ಅಭಿಮಾನದಿಂದ ಸ್ಮರಿಸಿಕೊಳ್ಳುತ್ತಾ, ಧರ್ಮಸಭೆಯ ಸರ್ವರಲ್ಲಿಯೂ ನನ್ನ ವಿಶೇಷ ವಿನಂತಿ ಏನೆಂದರೆ ನಮ್ಮ ಜೀವನದಲ್ಲಿ ಕ್ರಿಸ್ತರಿಗೆ ಸಾಕ್ಷಿಗಳಾಗಿ ಬಾಳುವುದರ ಮೂಲಕ, ನಮ್ಮ ಪ್ರಾರ್ಥನೆಗಳ ಮೂಲಕ ಹಾಗೂ ಸುವಾರ್ತ ಕೇಂದ್ರುಗಳಿಗಾಗಿ ನಾವು ನೀಡುವ ಧನಸಹಾಯ ಮತ್ತು ಕಾಣಿಕೆಗಳ ಮೂಲಕ ಸುವಾರ್ತ ಪ್ರಸಾರ ಕಾರ್ಯದಲ್ಲಿ ಅವರೊಂದಿಗೆ ನಮ್ಮನ್ನೇ ತೊಡಗಿಸಿಕೊಳ್ಳೋಣ. ಎಂಟು ನೂರು ವರ್ಷಗಳ ಹಿಂದೆ ದೈವಾಧೀನರಾಗಿದ್ದ ಅಸಿಸಿಯ ಸಂತ ಫ್ರಾನ್ಸಿಸರನ್ನು ಸ್ಮರಿಸುತ್ತಾ, “ಪ್ರೀತಿಯು ಪ್ರೀತಿಸಲ್ಪಡುವುದಿಲ್ಲ” ಎಂಬ ಅವರ ನುಡಿಗಳನ್ನು ಧ್ಯಾನಿಸೋಣ. ದೇವರ ಪ್ರೀತಿಯಲ್ಲಿ ಬಾಳುತ್ತಾ ಆ ಪ್ರೀತಿಯನ್ನು ಹತ್ತಿರ ಹಾಗೂ ದೂರವಿರುವ ಎಲ್ಲರಿಗೂ ತೋರಿಸುತ್ತಾ ಜೀವಿಸುವ ಅವರ ನಿರ್ಧಾರದಿಂದ ಪ್ರೇರಣೆಯನ್ನು ಪಡೆಯೋಣ. ಏಕೆಂದರೆ ಅವರು ಹೀಗೆ ನುಡಿದರು: "ನಮ್ಮನ್ನು ಅಷ್ಟಾಗಿ ಪ್ರೀತಿಸಿದ ಈ ಪ್ರೀತಿಯು ಅಷ್ಟಾಗಿ ಪ್ರೀತಿಸಲ್ಪಡಬೇಕು." (Saint Bonaventure of Bagnoregio, The life of Saint-Francis, chap IX, 1; Fonte Francescane, 1161). ಕಿರಿಯ ಪುಷ್ಪ ಸಂತ ತೆರೇಸಾರವರ ಶ್ರದ್ಧಾಭಕ್ತಿಯಿಂದಲೂ ಪ್ರೇರಣೆಯನ್ನು ಪಡೆಯೋಣ; ಅವರು ಅವರ ಮರಣದ ನಂತರವೂ ಸುವಾರ್ತ ಸೇವೆಯನ್ನು ಮಾಡಲು ಹಂಬಲಿಸಿದ್ದರು: "ನಾನೀಗ ಈ ಲೋಕದಲ್ಲಿ ಏನನ್ನು ಮಾಡುತ್ತೇನೋ ಅದನ್ನು ಸ್ವರ್ಗದಲ್ಲಿಯೂ ಮಾಡ ಬಯಸುತ್ತೇನೆ : ಪ್ರಭು ಯೇಸುವನ್ನು ಪ್ರೀತಿಸುವುದು ಮತ್ತು ಅವರು ಪ್ರೀತಿಸಲ್ಪಡುವಂತೆ ಮಾಡುವುದು." (Letter 220 to l'Abbe Belliere, 24 February 1897).

ಈ ಸಾಕ್ಷ್ಯಗಳಿಂದ ಪ್ರೇರಿತರಾಗಿ ಸುವಾರ್ತ ಪ್ರಸಾರ ಮಾಡುವ ಪ್ರಧಾನ ಕಾರ್ಯಕ್ಕಾಗಿ, ಅದು ಯಾವಾಲೂ ಪ್ರೀತಿಯ ಕಾರ್ಯವೆಂದರಿತು, ನಮ್ಮ ನಮ್ಮ ಕರೆ ಹಾಗೂ ನಾವು ಪಡೆದಿರುವ ವರದಾನಗಳಿಗನುಸಾರ ನಾವು ನಮ್ಮನ್ನೇ ಸಮರ್ಪಿಸಿಕೊಳ್ಳಲು ಸನ್ನದ್ಧರಾಗೋಣ. ವಿಶೇಷವಾಗಿ ವಿಶ್ವ ಸುವಾರ್ತ ಪ್ರಸಾರ ದಿನಾಚರಣೆಯಂದು, ನಿಮ್ಮ ಪ್ರಾರ್ಥನೆಗಳು ಮತ್ತು ದಾನಧರ್ಮಗಳ ನೆರವು ಸರ್ವರಿಗೂ ವಿಶೇಷವಾಗಿ ತೀರ ಬಡತನದಲ್ಲಿರುವವರಿಗೂ ಹಾಗೂ ಅತ್ಯಧಿಕ ಕೊರತೆಯಲ್ಲಿರುವವರಿಗೂ ದೇವರ ಪ್ರೀತಿಯ ಸುವಾರ್ತೆಯ ಸ್ಪರ್ಶವನ್ನು ನೀಡಲು ತುಂಬಾ

ಉಪಯುಕ್ತವಾಗಿರುತ್ತದೆ. ನಿಮ್ಮ ಪ್ರತಿಯೊಂದು ಕೊಡುಗೆ, ಅದು ಎಷ್ಟೇ ಚಿಕ್ಕದಾಗಿದ್ದರೂ ಸಹ, ಅದು ಸುವಾರ್ತ ಸೇವೆಯ ಬಾಂಧವ್ಯದ ಅರ್ಥಭರಿತ ಕ್ರಿಯೆಯಾಗಿರುತ್ತದೆ. "ವಿಶ್ವದಾದ್ಯಂತ ಸೇವೆ ಸಲ್ಲಿಸುತ್ತಿರುವ ಸುವಾರ್ತ ಪ್ರಸಾರಕರಿಗೆ ನೆರವು ನೀಡಲು, ನೀವು ನನಗೆ ನೀಡುವ ಸಹಾಯಕ್ಕೆ ನಾನು ನಿಮಗೆ ಮಗದೊಮ್ಮೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ." (Video Message for World Mission Day 2025, 19 October 2025). ನಿಮ್ಮೊಂದಿಗೆ ಆಧ್ಯಾತ್ಮಿಕ ಬಾಂಧವ್ಯವನ್ನು ಬೆಳೆಸಲು ನಾನು ನನ್ನ ಆಶೀರ್ವಾದವನ್ನು ಈ ಮುಂದಿನ ಸರಳ ಪ್ರಾರ್ಥನೆಯೊಂದಿಗೆ ನೀಡುತ್ತಿದ್ದೇನೆ.

ಪರಮ ಪವಿತ್ರ ತಂದೆಯೇ, ನಮ್ಮೆಲ್ಲರನ್ನು ಒಂದುಗೂಡಿಸುವ ಮತ್ತು ನವೀಕರಿಸುವ ಪ್ರಭು ಕ್ರಿಸ್ತರ ಪ್ರೀತಿಯಲ್ಲಿ ನಾವೆಲ್ಲರೂ ಬೇರೂರುವಂತೆ, ನಮ್ಮನ್ನು ಕ್ರಿಸ್ತರಲ್ಲಿ ಒಂದುಗೂಡಿಸಿರಿ. ಧರ್ಮಸಭೆಯ ಎಲ್ಲಾ ಸದಸ್ಯರು ಸುವಾರ್ತ ಸೇವೆಯಲ್ಲಿ ಒಂದಾಗುವಂತೆ ಅನುಗ್ರಹಿಸಿರಿ; ಅವರೆಲ್ಲರೂ ಪವಿತ್ರಾತ್ಮರಿಗೆ ವಿಧೇಯರಾಗಲಿ, ಅವರೆಲ್ಲರೂ ಸುವಾರ್ತೆಗೆ ಸಾಕ್ಷ್ಯ ನೀಡುವ ಧೈರ್ಯಶಾಲಿಗಳಾಗಲಿ, ಅವರೆಲ್ಲರೂ ಅನುದಿನವೂ ಸಮಸ್ತ ಸೃಷ್ಟಿಯ ಮೇಲೆ ನಿಮಗಿರುವ ಪ್ರಾಮಾಣಿಕ ಪ್ರೀತಿಯನ್ನು ಸಾರುವವರಾಗಲಿ ಹಾಗೂ ಈ ಪ್ರೀತಿಯನ್ನು ತಮ್ಮಲ್ಲಿ ಬೆಳಗಿಸಿಕೊಳ್ಳುವವರಾಗಲಿ.

ಸುವಾರ್ತ ಪ್ರಸಾರ ಕಾರ್ಯದಲ್ಲಿ ನಿರತರಾಗಿರುವ ಎಲ್ಲಾ ಸ್ತ್ರೀ ಪುರುಷರನ್ನು ಆಶೀರ್ವದಿಸಿರಿ, ಅವರ ಪರಿಶ್ರಮದಲ್ಲಿ ನಿಮ್ಮ ಬೆಂಬಲ ಸದಾ ಅವರೊಂದಿಗಿರಲಿ, ಅಂತೆಯೇ ಭರವಸೆಯಿಂದ ಅವರನ್ನು ಮುನ್ನಡೆಸಿರಿ!

ಸುವಾರ್ತ ಪ್ರಸಾರ ಸೇವೆಯ ರಾಣಿಯಾದ ಪೂಜ್ಯ ಕನ್ಯಾಮರಿಯಮ್ಮನವರೇ, ಪ್ರಪಂಚದಾದ್ಯಂತ ನಡೆಯುವ ಎಲ್ಲಾ ಸುವಾರ್ತ ಪ್ರಸಾರ ಕಾರ್ಯಗಳಲ್ಲಿ ನೀವು ನಮ್ಮೊಂದಿಗೆ ಪ್ರಸನ್ನರಾಗಿರಿ. ನಾವೆಲ್ಲರೂ ಶಾಂತಿಯ ಸಾಧನಶಾಲಿಯಾಗುವಂತೆ ಹಾಗೂ ಲೋಕದಾದ್ಯಂತ ಸರ್ವರೂ ರಕ್ಷಣೆಯನ್ನು ತರುವ ಬೆಳಕನ್ನು ಪ್ರಭು ಕ್ರಿಸ್ತರಲ್ಲಿ ಗುರುತಿಸುವಂತೆ ನಮಗಾಗಿ ಪ್ರಾರ್ಥಿಸಿರಿ, ಆಮೆನ್.

ವ್ಯಾಟಿಕನ್‌ನಿಂದ, 25 ಜನವರಿ 2026, ಸಾಮಾನ್ಯ ಕಾಲದ ಮೂರನೇ ಭಾನುವಾರ, ಸಂತ ಪೌಲರ ಮನಪರಿವರ್ತನೆಯ ಹಬ್ಬ.

ಲಿಯೋ ಪೋಪ್ XIV

From the Vatican, 25 January 2026, Third Sunday in Ordinary Time, Feast of the Conversion of Saint Paul.

Leo PP. XIV